

# ನಿಜವಾದ ಭಕ್ತಿ


ಕಥೆ: ಪರಮಹಂಸದಾಸ ಚಿತ್ರ: ಶಂಕರ್

ಸುಮಾರು ಒಂದು ಸಾವಿರ ವರ್ಷಗಳ ಹಿಂದೆ, ರಾಜರಾಜ ಚೋಳನು ತಮಿಳುನಾಡನ್ನು ಆಳುತ್ತಿದ್ದನು. ರಾಜನು ತನ್ನ ರಾಜಧಾನಿಯಾಗಿದ್ದ ತಂಜಾವೂರಿನಲ್ಲಿ ಭಗವಾನ್ ಶಿವನಿಗಾಗಿ ಒಂದು ದೇವಸ್ಥಾನವನ್ನು ಕಟ್ಟಬೇಕೆಂದು ನಿರ್ಧರಿಸಿದನು. ಅದಕ್ಕಾಗಿ ಹಗಲು ರಾತ್ರಿ ಕೆಲಸಮಾಡಲು ಸಾವಿರಾರು ಕೂಲಿಯಾಳುಗಳನ್ನು ನೇಮಿಸಲಾಯಿತು.





ಅದೇ ನಗರದಲ್ಲಿ ಅಳಗಿಯೆಂಬ ಮುದುಕಿಯಿದ್ದಳು.




ಆಗ ಅಜ್ಜಿಯ ಮನಸ್ಸಿನಲ್ಲಿ ಥಟ್ಟನೆ ಒಂದು ಯೋಚನೆ ಹೊಳೆಯಿತು.
ದೇವಸ್ಥಾನ ಕಟ್ಟುತ್ತಿರುವ ಕೂಲಿ ಆಳುಗಳಿಗೆ ನಾನು ಮಜ್ಜಿಗೆ ಹಂಚಿದರೆ ನಾನು ಭಗವಂತನ ಸೇವೆ ಮಾಡಿದಂತಾಗುತ್ತದೆ.
4
ಅದರಂತೆ ಆ ಅಜ್ಜಿ ಬಾಯಾರಿದವರಿಗೆಲ್ಲ ಮಜ್ಜಿಗೆ ಹಂಚಲು ತೊಡಗಿದಳು.
5
ಅಜ್ಜಿ, ನಿನಗೆ ಭಗವಂತ ದೀರ್ಘಾಯುಸ್ಸನ್ನು ಕೊಡಲಿ.
ನೀನು ದೇವರ ಸೇವೆಯಲ್ಲಿ ತೊಡಗಿದ್ದೀಯ. ತಗೋ ಇನ್ನೂ ಸ್ವಲ್ಪ ಮಜ್ಜಿಗೆ ಕುಡಿ.
6
ನಿರ್ಮಾಣದ ಕೆಲಸ ಮುಗಿಯುತ್ತ ಬಂತು. ಗೋಪುರದ ಮೇಲಿಡಲು ಒಂದು ಕಲ್ಲು ಬೇಕಿತ್ತು. ಅಜ್ಜಿಗೆ ದುಃಖವಾಗುತ್ತಿತ್ತು.
7
ಅಜ್ಜಿ, ಯಾಕಿಷ್ಟು ಚಿಂತಿಸುತ್ತಿದ್ದೀಯೆ? ದೇವಸ್ಥಾನದ ನಿರ್ಮಾಣ ಮುಗಿದು ಹೋದರೆ ಮಜ್ಜಿಗೆ ಹಂಚಲಾಗದು ಎಂದು ನಿನಗೆ ದುಃಖವೆ?
ದೇವಸ್ಥಾನದ ನಿರ್ಮಾಣಕ್ಕಾಗಿ ನಾನೇನೂ ಕೊಡಲಾಗಲಿಲ್ಲವಲ್ಲ ಎಂದಷ್ಟೇ ನನ್ನ ಕೊರಗು.
ದೇವಸ್ಥಾನಕ್ಕಾಗಿ ಏನಾದರೂ ದಾನಮಾಡುವಷ್ಟು ಶ್ರೀಮಂತಳೇ ನೀನು?


ಇದ್ದಕ್ಕಿದ್ದಂತೆಯೇ ಆಕೆಗೆ ತನ್ನ ಗುಡಿಸಿಲಿನ ಮುಂದೆ ದೊಡ್ಡ ಬಂಡೆಯಿರುವುದು ನೆನಪಿಗೆ ಬಂತು. ದೇವಸ್ಥಾನದ ಕಟ್ಟಡ ಮುಗಿಯಲು ಇನ್ನೊಂದು ಕಲ್ಲಷ್ಟೇ ಅಲ್ಲವೆ ಬೇಕಿರುವುದು?
8
ಮಗು, ನನ್ನದೊಂದು ಕೋರಿಕೆಯಿದೆ. ನೀನು ನಡೆಸಿಕೊಡುವೆಯಾ ?
ಹೇಳು ಅಜ್ಜಿ, ನನ್ನ ಕೈಲಾದರೆ ಖಂಡಿತ ನಡೆಸಿಕೊಡುತ್ತೇನೆ.
ನನ್ನ ಗುಡಿಸಿಲಿನ ಮುಂದೆ ನನಗೆ ಸೇರಿದ ಒಂದು ಬಂಡೆ ಇದೆ. ಅದನ್ನೇ ಗೋಪುರಕ್ಕಾಗಿ ಉಪಯೋಗಿಸುವಿರಾ?
ಆ ದೇವಸ್ಥಾನದ ಭವ್ಯವಾದ ಗೋಪುರವನ್ನು ನೆನೆಯುತ್ತ ಮತ್ತು ಶಿವನನ್ನು ಪ್ರಾರ್ಥಿಸುತ್ತ ಆ ರಾತ್ರಿ ರಾಜನು ನಿದ್ದೆ ಹೋದನು.
9
ಪ್ರಧಾನ ಶಿಲ್ಪಿ ಆಕೆಯ ಸಲಹೆಗೆ ಒಪ್ಪಿ ಆ ಬಂಡೆಯನ್ನು ಗೋಪುರಕ್ಕಾಗಿ ಬಳಸಿದನು. ದೇವಸ್ಥಾನದ ಕಟ್ಟಡ ನಿರ್ಮಾಣ ಮುಗಿಯಿತು. ರಾಜನಿಗೆ ಬಹಳ ಸಂತೋಷವಾಯಿತು.
ಅಲ್ಲಿಯತನಕ ಶಿವನಿಗೋಸ್ಕರ ಯಾರೂ ಅಷ್ಟು ದೊಡ್ಡ ಗೋಪುರ ವನ್ನು ಕಟ್ಟಿರಲಿಲ್ಲ.


ಆ ರಾತ್ರಿ, ರಾಜನಿಗೊಂದು ಕನಸು ಬಿತ್ತು. ಶಿವನು ಕನಸಿನಲ್ಲಿ ಬಂದು.....
10
ಎಲೈ ರಾಜನೇ, ಅಳಗಿ ಎಂಬ ಮುದುಕಿಯು ದಾನ ಮಾಡಿದ ಬಂಡೆಯಡಿ ಇರಲು ನನಗೆ ಬಹಳ ಸಂತೋಷವಾಗಿದೆ.
ರಾಜನಿಗೆ ಆಶ್ಚರ್ಯವೋ ಆಶ್ಚರ್ಯ!
11
ನಾನು ಅಷ್ಟೊಂದು ದೊಡ್ಡ ಮಂದಿರವನ್ನೇ ಶಿವನ ವಾಸಸ್ಥಾನಕ್ಕಾಗಿ ಕಟ್ಟಿಸಿದ್ದೇನೆ. ಆದರೆ ಶಿವನು ಅಳಗಿ ಎಂಬ ಮುದುಕಿಯ ಬಂಡೆಯಡಿ ಸಂತೋಷದಿಂದ ವಾಸಿಸುತ್ತಾನಂತೆ. ಯಾರು ಈ ಮುದುಕಿ?
ಮಾರನೇ ದಿನ ರಾಜನು ವಿಚಾರಿಸಿ ತಾನೇ ಆ ಮುದುಕಿಯನ್ನು ಕಾಣಲು ಹೋದ.
12
ಅಮ್ಮ, ಶಿವನಿಗಾಗಿ ನೀವೇನು ಸೇವೆ ಮಾಡಿದ್ದೀರೋ ಕಾಣೆ. ಆದರೆ ಶಿವನು ನನ್ನ ಕನಸ್ಸಿನಲ್ಲಿ ಬಂದು ನಿಮ್ಮ ಬಂಡೆಯಡಿ ವಾಸಿಸುವೆನೆಂದು ಹೇಳಿದ. ನೀವೇನು ಮಾಡಿದಿರಿ?
ಮಹಾರಾಜ, ನಾನೇನೂ ಮಾಡಿಲ್ಲ. ದೇವಸ್ಥಾನಕ್ಕಾಗಿ ಕೆಲಸ ಮಾಡುತ್ತಿದ್ದ ಈ ಕೂಲಿ ಆಳುಗಳಿಗೆ ಮಜ್ಜಿಗೆ ಹಂಚುತ್ತಿದ್ದೆ. ನನ್ನ ಗುಡಿಸಿಲಿನ ಮುಂದಿದ್ದ ಈ ಬಂಡೆಯನ್ನು ಗೋಪುರದ ಮೇಲ್ಭಾಗವನ್ನು ಸಂಪೂರ್ಣ ಗೊಳಿಸಲು ಉಪಯೋಗಿಸಿಕೊಳ್ಳಿ ಎಂದು ಕೇಳಿಕೊಂಡೆ.
ರಾಜನು ಆಕೆಯ ಭಕ್ತಿಯನ್ನು ಕಂಡು ಮೂಕನಾದನು.
13
ನೀನು ನಿನ್ನ ಭಕ್ತಿಯಿಂದ ಭಗವಂತನನ್ನೇ ಬಂಧಿಸಿರುವೆ.
ಆ ಮುಗ್ಧ ಮುದುಕಿಯ ನೆನಪಿಗಾಗಿ ರಾಜನು ದೇವಸ್ಥಾನದ ಬಳಿ ಒಂದು ಕೊಳವನ್ನು ಕಟ್ಟಿಸಿದನು. ಆ ಕೊಳ ಇಂದಿಗೂ ಇದೆ.